ಬಹುಭಾಷಾ ಸನ್ನಿವೇಶದಲ್ಲಿ ಕಲಿಕೆ

ಬಿನಯ್ ಪಟ್ಟನಾಯಕ್

ಹಿನ್ನೆಲೆ

ಜಾರ್ಖಂಡ್ ಒಂದು ಬಹುಭಾಷೆಗಳ ರಾಜ್ಯ. ಅಲ್ಲಿ ಸುಮಾರು ಹತ್ತೊಂಬತ್ತು ಸ್ಥಳೀಯ ಮತ್ತು ಪ್ರಾದೇಶಿಕ ಭಾಷೆಗಳನ್ನು ಮಾತನಾಡುವ ಸುಮಾರು 32ಕ್ಕಿಂತಲೂ ಹೆಚ್ಚು ಸ್ಥಳೀಯ ಸಮುದಾಯಗಳಿವೆ. ಇವುಗಳಲ್ಲಿ ಕೆಲವು ಮುಖ್ಯ ಸಂಪರ್ಕ ಭಾಷೆಗಳು ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಬೇರೆ-ಬೇರೆ ಸ್ಥಳೀಯ ಭಾಷೆಗಳ ನಡುವೆ ಸೇತುವಿನಂತೆ ಕಾರ್ಯನಿರ್ವಹಿಸುತ್ತವೆ. ರಾಜ್ಯದಲ್ಲಿ ಒಂಬತ್ತು "ವಿಶೇಷವಾಗಿ ದೌರ್ಬಲ್ಯಪೀಡಿತ ಸ್ಥಳೀಯ ಪಂಗಡಗಳಿದ್ದು (Particularly Vulnerable Indigenous Groups-PVTGs) ಅವುಗಳಲ್ಲಿ ಕೆಲವು ಪಂಗಡಗಳ ಭಾಷೆಗಳು ಅತ್ಯಂತ ಅಪಾಯದ ಅಂಚಿನಲ್ಲಿವೆ.

ಇವೆಲ್ಲಾ ಸಮುದಾಯಗಳಿಂದ ಬರುವ ಮಕ್ಕಳ ಮನೆಮಾತು, ಶಾಲಾ ಭಾಷೆಯಾದ ಹಿಂದಿಗಿಂತ ತೀರಾ ಭಿನ್ನವಾಗಿರುವ ಕಾರಣಕ್ಕೆ ಶಾಲೆಯ ಆರಂಭಿಕ ವರ್ಷಗಳಲ್ಲಿ ಭಾರೀ ಕಲಿಕಾ ತೊಂದರೆಗಳನ್ನು ಎದುರಿಸುತ್ತಾರೆ. ರಾಜ್ಯದಲ್ಲಿ ಪ್ರಾಥಮಿಕ ಶಾಲೆಗಳನ್ನು ಪ್ರವೇಶಿಸುವ ಮಕ್ಕಳ ಸರಾಸರಿ ಮೂರನೇ ಒಂದರಷ್ಟು ಮಕ್ಕಳು ಆರಂಭಿಕ ಹಂತದಲ್ಲಿಯೇ ಶಾಲೆ ತೊರೆಯುತ್ತಾರೆ. ಇದು ದೇಶದಲ್ಲೇ ಶಾಲೆ ತೊರೆಯುವ ಮಕ್ಕಳ ಅತಿಹೆಚ್ಚಿನ ಪ್ರಮಾಣವಾಗಿದೆ. ಶಾಲೆಯಲ್ಲಿ ಮುಂದುವರಿಯುವ ಮಕ್ಕಳು ಎಂಟನೇ ತರಗತಿಗೆ ಬರುವ ವೇಳೆಗಾಗಲೇ ಬಹಳಷ್ಟು ಹತಾಶರಾಗಿರುತ್ತಾರೆ. ಅವರು ತಮ್ಮ ಪಠ್ಯಪುಸ್ತಗಳ ವಿಷಯವನ್ನಾಗಲೀ, ತಮ್ಮ ಮನೆ ಹಾಗು ಸಮುದಾಯಗಳ ಕಲಿಕಾ ಅನುಭವಗಳನ್ನು ಸಂಪೂರ್ಣವಾಗಿ ತಳ್ಳಿಹಾಕಿ ತಮಗೆ ಹಿಂದಿ ಭಾಷೆಯಲ್ಲಿ ಪಾಠಮಾಡುವ, ಹಿಂದಿ ಭಾಷೆಯಲ್ಲಿ ಮಕ್ಕಳಿಗೆ ಪರೀಕ್ಷೆಗಳನ್ನು ನೀಡುವ ಶಿಕ್ಷಕರನ್ನಾಗಲೀ ಅರ್ಥಮಾಡಿಕೊಳ್ಳಲಾಗದೆ ಶಾಲೆಯಲ್ಲಿ ಮುಂದುವರಿಯಲು ಹೆಣಗಬೇಕಾಗುತ್ತದೆ. ಆದ್ದರಿಂದ, "ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಪರಿಷತ್" (NCERT), ASERನಂತಹ ರಾಷ್ಟ್ರೀಯ ಸಾಧನೆಯ ಸರ್ವೇಕ್ಷಣಗಳ ವರದಿಯಲ್ಲಿ ಜಾರ್ಖಂಡ್ ರಾಜ್ಯದ ಮಕ್ಕಳ ಕಲಿಕಾ ಫಲಿತಾಂಶಗಳು ಪಟ್ಟಿಯ ಕೊನೆಯನ್ನು ಅಲಂಕರಿಸುವುದು ಯಥಾಪ್ರಕಾರ ನಡೆದೇ ಇದೆ. ಉಳಿದಂತೆ, ಸ್ಥಳೀಯ ಪಠ್ಯಪುಸ್ತಕಗಳು ದೊರೆಯದೇ ಇರುವುದು ಹಾಗು ರಾಜಕೀಯ ಅಸ್ಥಿರತೆಗಳೂ ಮಕ್ಕಳ ಕಳಪೆ ಸಾಧನೆಗೆ ಕಾರಣಗಳಾಗುತ್ತವೆ.

ಕುತೂಹಲಕಾರಿ ಸಂಗತಿಯೆಂದರೆ, ಈ ರಾಜ್ಯವು ಹನ್ನೆರಡು ಸ್ಥಳೀಯ (ಬುಡಕಟ್ಟು) ಮತ್ತು ಪ್ರಾದೇಶಿಕ ಭಾಷೆಗಳನ್ನು ಹಿಂದಿ ಹಾಗು ಆಂಗ್ಲಭಾಷೆಗಳ ನಂತರದ ರಾಜ್ಯದ ಅಧಿಕೃತ ಭಾಷೆಗಳೆಂದು ಅಧಿಸೂಚನೆ ಹೊರಡಿಸಿದೆ. ಇಷ್ಟಾಗಿಯೂ, ರಾಜ್ಯದ 40,000 ಪ್ರಾಥಮಿಕ ಶಾಲೆಗಳ ತರಗತಿಗಳಲ್ಲಿ ಮಕ್ಕಳ ಮಾತೃಭಾಷೆಯ ಬಳಕೆಗೆ ಯಾವುದೇ ಅವಕಾಶ ಇರಲಿಲ್ಲ. ಆಡಳಿತ ವರ್ಗವಾದರೋ ಅತಿಹೆಚ್ಚು ಇರುವ ಶಾಲೆ ತೊರೆಯುವ ಮಕ್ಕಳ ಪ್ರಮಾಣದ ಕುರಿತಾಗಲೀ, ಕನಿಷ್ಠ ಕಲಿಕಾ-ಫಲಿತಾಂಶಗಳ ವಿಚಾರವಾಗಿ-ಯಾಗಲೀ, ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಆತಂಕ ಹುಟ್ಟಿಸುವ ಗೈರುಹಾಜರಿಯನ್ನು ಕುರಿತಾಗಲೀ ತಲೆಕೆಡಿಸಿಕೊಂಡಂತೆ ಇರಲಿಲ್ಲ. ರಾಜ್ಯದ ಬಹುಸಂಖ್ಯಾತ ಮಕ್ಕಳಿಗೆ ಸಂಬಂಧಿಸಿದ ಈ ಗಂಭೀರ ಸಮಸ್ಯೆಗಳ ಬಗ್ಗೆ ಎಲ್ಲೂ, ಯಾವ ವಿಧದ ಚರ್ಚೆಯೂ ಆಗಿರಲಿಲ್ಲ.

ಶಾಲೆಯ ಆರಂಭಿಕ ವರ್ಷಗಳಲ್ಲಿ ಮಕ್ಕಳ ಕಲಿಕಾ-ಅನುಭವವನ್ನು ಹಾಗು ಮಕ್ಕಳು ಶಾಲೆ ತೊರೆಯಲು ಇರುವ ಕಾರಣಗಳನ್ನು ಅರ್ಥಮಾಡಿಕೊಳ್ಳಲು ತಂಡವೊಂದನ್ನು ರಚಿಸಿ ಅದನ್ನು "ಮಾತೃಭಾಷಾ ಆಧಾರಿತ ಕ್ರಿಯಾತ್ಮಕ ಭಾಷಾ ಕಲಿಕೆ" (Mother-tongue based Active Language Learning -M-TALL) ಎಂದು ಹೆಸರಿಸಲಾಯಿತು.

'ಮಾತೃಭಾಷಾ ಆಧಾರಿತ ಕ್ರಿಯಾತ್ಮಕ ಭಾಷಾ ಕಲಿಕೆ' ಹಾಗು ಅದರ ಉಪಕ್ರಮಗಳು

ಶಾಲೆಗಳು, ಸಮುದಾಯಗಳು ಹಾಗು ಅಲ್ಲಿನ ಮಕ್ಕಳು ನೀಡಿದ ಹಿಮ್ಮಾಹಿತಿಯ ಆಧಾರದ ಮೇಲೆ ಭಾಷೆಗಳ ಆದ್ಯತೆಯನ್ನು ಸೂಚಿಸುವ ವರ್ಣ-ಚಿಹ್ನೆಗಳಿಂದ ಕೂಡಿದ ರಾಜ್ಯದ ಭಾಷಾ ನಕಾಶೆಯನ್ನು ರಚಿಸಲಾಯಿತು. ಈ ಪ್ರಯತ್ನದಿಂದ ಹೊರಹೊಮ್ಮಿದ ತಥ್ಯವೆಂದರೆ, ಇದಕ್ಕೆ ಪ್ರತಿಸ್ಪಂದಿಸಿದ ಶೇಕಡಾ 96ರಷ್ಟು ಮಂದಿ ಪ್ರಾಂತೀಯ ಆಡುಭಾಷೆಗಳಲ್ಲಿ ವ್ಯವಹರಿಸಿದರೆ, ಶೇಕಡಾ 4ರಷ್ಟು ಮಂದಿ ಮಾತ್ರ ತಮ್ಮ ಮಾತೃಭಾಷೆಯಾಗಿ ಹಿಂದಿಯಲ್ಲಿ ವ್ಯವಹರಿಸುತ್ತಿದ್ದರು. ಆದರೆ, ತಮ್ಮ ಪೋಷಕರೊಂದಿಗೆ ವ್ಯವಹರಿಸುವಾಗ, ಆಡುವಾಗ ಅಥವಾ ದೈನಂದಿನ ವ್ಯವಹಾರಗಳಲ್ಲಿ ನಿರತರಾಗಿರುವಾಗ ಬಹುತೇಕ ಮಕ್ಕಳು ತಮ್ಮದೇ ಪ್ರಾದೇಶಿಕ ಉಪಭಾಷೆಗಳನ್ನು, ಮನೆಯ ಆಡುಭಾಷೆಗಳನ್ನು ಬಳಸುತ್ತಿದ್ದರು. ಹೀಗಾಗಿ, ಬಹಳಷ್ಟು ಬಾರಿ ಭಾಷಾ ಭಿನ್ನತೆಗಳ ಕಾರಣದಿಂದ ಮಕ್ಕಳು ಕಲಿಕಾ-ಅಡಚಣೆಗಳನ್ನು ಎದುರಿಸುತ್ತಿದ್ದು, ಅದು ಬೇಸರಕ್ಕೆ ಎಡೆಮಾಡಿ, ಶಾಲೆ ತೊರೆಯುವುದರಲ್ಲಿ ಪರ್ಯಾಪ್ತಿ ಕಾಣುತ್ತಿತ್ತು ಎಂಬ ವಿಷಯ ನಿಚ್ಚಳವಾಯಿತು.

ಸಚಿತ್ರ ಶಬ್ದಕೋಶಗಳ ಅಭಿವೃದ್ಧಿ

ಈ ಫಲಿತಗಳ ಬಗೆಗೆ ವಿಚಾರ ಮಾಡುತ್ತಾ ಪ್ರತಿ ಸಮುದಾಯದಲ್ಲೂ ಮಕ್ಕಳು ತಮ್ಮ ಆರಂಭಿಕ ವರ್ಷಗಳಲ್ಲಿ ಏನನ್ನು ಮಾಡಲು ಇಚ್ಛಿಸುತ್ತಾರೆ ಎಂಬುದನ್ನು ಅರ್ಥಮಾಡಿಕೊಳ್ಳಲು ಬೇರೆ-ಬೇರೆ ಭಾಷಾತಜ್ಞರ ತಂಡಗಳೊಂದಿಗೆ ಚರ್ಚೆಗಳನ್ನು ಹಮ್ಮಿಕೊಳ್ಳಲಾಯಿತು.

ಅಂತಹ ಮಕ್ಕಳ ಸ್ನೇಹಿ ಕ್ಷೇತ್ರಗಳನ್ನು ಮಕ್ಕಳ ಮಾತೃಭಾಷೆ ಆಧಾರಿತ ಶಾಲಾ ಭಾಷಾ ತಯಾರಿ ಉಪಕ್ರಮಗಳ ಯೋಜನೆಗೆ ಪ್ರಸ್ತುತವಾದ ಸ್ಥೂಲ ವಿಷಯಗಳಾಗಿ ಕಲೆಹಾಕಲಾಯಿತು. ಮಕ್ಕಳು ಆಡಲು,

ಹಾಡಲು, ಕುಣಿಯಲು, ತಮ್ಮ ಸುತ್ತಲಿನ ನಾನಾ ರೀತಿಯ ಜನರೊಂದಿಗೆ, ತಮ್ಮ ಸ್ನೇಹಿತರೊಂದಿಗೆ ಚರ್ಚಿಸಲು, ಆಟಿಕೆಗಳನ್ನು ಮಾಡಲು, ಅನ್ವೇಷಿಸಲು, ಕಥೆಗಳನ್ನು ಕೇಳಲು ಮತ್ತು ಹೇಳಲು, ಸಚಿತ್ರ ಕಥೆ ಪುಸ್ತಕಗಳನ್ನು ಓದಲು ಬಯಸುತ್ತಾರೆ ಎಂಬುದನ್ನು ಕಂಡುಕೊಂಡೆವು. ಜೊತೆಗೆ ನಾವು ಮಕ್ಕಳ ಅಚ್ಚುಮೆಚ್ಚಿನ ಕಥೆಗಳು, ಹಾಡು, ಕುಣಿತ, ಗಾದೆ–ಒಗಟು, ಚಿತ್ರ, ಆಟಿಕೆ, ಆಟ, ಕಲೆ ಹಾಗು ಕರಕುಶಲ ವಸ್ತುಗಳು ಮತ್ತು ಇತರ ಅನುಭವಗಳನ್ನು ಕಲೆಹಾಕಿದೆವು.

2014ರಲ್ಲಿ, "ಮಾತೃಭಾಷಾ ಆಧಾರಿತ ಕ್ರಿಯಾತ್ಮಕ ಭಾಷಾ ಕಲಿಕೆ" ಕಾರ್ಯಕ್ರಮವು "ನನ್ನ ಭಾಷೆಯಲ್ಲಿ ನನ್ನ ಜಗತ್ತು" (Meri Bhasha Mein Meri Duniya) ಎಂಬ ದ್ವಿಭಾಷಾ ಸಚಿತ್ರ ಶಬ್ದಕೋಶಗಳನ್ನು ಒಂಬತ್ತು ಸ್ಥಳೀಯ ಹಾಗು ಪ್ರಾಂತೀಯ ಭಾಷೆಗಳಲ್ಲಿ ಅಂಗನವಾಡಿಗಳಲ್ಲಿ ಬಳಸಲು ಮತ್ತು ಶಿಕ್ಷಕರ ಹಾಗು ಮಕ್ಕಳ ಸಣ್ಣ ಗುಂಪುಗಳೊಂದಿಗೆ (ಹೆಚ್ಚು ವಿಭಿನ್ನ ಭಾಷಾ ಪರಿಸರಗಳಿಂದ ಮಕ್ಕಳಿದ್ದಷ್ಟೂ ಹೆಚ್ಚು ಪ್ರಯೋಜನಕಾರಿ) ಒಡನಾಡುವ ಪೋಷಕರ ಬಳಕೆಗಾಗಿ ಹೊರತಂದಿತು. ಮಕ್ಕಳು ಜೊತೆಗೂಡಿ, ಒಂದು ಪುಟವನ್ನು ತೆರೆದು, ಅಲ್ಲಿನ ಚಿತ್ರದ ವಿವಿಧ ಅಂಶಗಳನ್ನು ತಮ್ಮ ಮಾತೃಭಾಷೆಗಳಲ್ಲಿ ಚರ್ಚಿಸುವುದು ಹಾಗು ಆ ಪುಟದ ಪ್ರತಿ ವಸ್ತುವಿನೊಡನೆ ಅಥವಾ ಘಟನೆಯೊಡನೆ ತನ್ನ ಅನುಭವವನ್ನು ಹಂಚಿಕೊಳ್ಳುವುದು ಇದರ ಉದ್ದೇಶವಾಗಿತ್ತು. ಇದರಿಂದ ಪ್ರತಿ ಮಗುವಿಗೆ ಹಾಗು ಸಂಬಂಧಪಟ್ಟ ಶಿಕ್ಷಕರಿಗೆ ಅಥವಾ ಪೋಷಕರಿಗೆ ಬಳಸಲು ಸಮೃದ್ಧ ಸ್ಥಳೀಯ ಕಲಿಕಾ ಸಂಪನ್ಮೂಲವು ದೊರಕಿದಂತಾಯಿತು. ಇದು ಚಿತ್ರ ಹಾಗು ಪಠ್ಯದೊಂದಿಗಿನ, ಸಹಪಾಠಿಗಳು, ಶಿಕ್ಷಕರು ಹಾಗು ಪೋಷಕರ ನಡುವಿನ ಸಂವಾದಕ್ಕೆ ಅವಕಾಶ ಒದಗಿಸಿತು. ಇದು ಮಗುವಿನ (ಅಥವಾ ಮಕ್ಕಳ) ಭಾಷಾ ಕಲಿಕಾ ಕೌಶಲಗಳಿಗೆ ಭದ್ರ ಬುನಾದಿಯನ್ನು –ಮೊದಲು ಮಗುವಿನ ಮಾತೃಭಾಷೆಯಲ್ಲಿ, ಬಳಿಕ ಅದನ್ನು ಬಿಡದೆ ಅನುಸರಿಸಿ ಹಿಂದಿ ಮತ್ತಿತರ ಭಾಷೆಗಳಲ್ಲಿ–ಒದಗಿಸಲು ನೆರವಾಯಿತಲ್ಲದೆ, ಮಗುವಿನ ಜ್ಞಾನ, ಕೌಶಲಗಳು, ಮನೋಭಾವಗಳಲ್ಲಿ ಸಮೃದ್ಧಿಯನ್ನು ತರಲು, ವಿಷಯದ ಪರಿಕಲ್ಪನೆಯಲ್ಲಿ ಮಗುವಿನ ಆಸಕ್ತಿಯನ್ನು ಸೆಳೆಯಲು ನೆರವಿಗೆ ಬಂತು. ಇದೆಲ್ಲವನ್ನೂ, ಗುಂಪಿನ ಭಾಷಾ ವೈವಿಧ್ಯದ ಹಂತ ಹಾಗು ಗುಂಪಿನೊಂದಿಗಿನ ಒಡನಾಟಗಳ ಸ್ತರ ಮತ್ತು ದಿಕ್ಕಿಗೆ ಅನುಗುಣವಾಗಿ ಸಾಧಿಸಿತು.

ತರುವಾಯ, ಮೇಲಿನ ಪ್ರತಿ ವಿಷಯದ ಚಿತ್ರಗಳನ್ನೂ ವಿಭಿನ್ನ ಭಾಷಾ ತಂಡಗಳಿರುವ ಮಕ್ಕಳ ಜೊತೆ ಸಣ್ಣ ಪ್ರಮಾಣದ ಚರ್ಚೆಯಲ್ಲಿ ಕಲಿಕೆಯ ಪ್ರಾಥಮಿಕ ಸಾಮಗ್ರಿಯಾಗಿ ಬಳಸಲಾಯಿತು. ಈ ಚಿತ್ರಗಳಿಗೆ ಹೊಂದಿಕೊಂಡಂತೆ ತಮ್ಮ ಅನುಭವ ಮತ್ತು ವಿಚಾರಗಳನ್ನು ತಮ್ಮದೇ ಭಾಷೆಗಳಲ್ಲಿ ಹಂಚಿಕೊಳ್ಳುವಂತೆ ಅಂಗನವಾಡಿ ಕಾರ್ಯಕರ್ತೆಯರು ಹಾಗು ಶಿಕ್ಷಕರು ಮಕ್ಕಳನ್ನು ಹುರಿದುಂಬಿಸಿದರು.

ಭವಿಷ್ಯದಲ್ಲಿ ಬಳಸಿಕೊಳ್ಳಲು ಅನುಕೂಲವಾಗುವಂತೆ ಮಕ್ಕಳು ಬಳಸಿದ ಹೊಸ ಪದಗಳನ್ನು ಕಲಿಕಾ ಸುಗಮಗಾರರು (Facilitators) ಗುರುತು ಮಾಡಿಕೊಂಡರು. ಮಕ್ಕಳಿಂದ ಬಂದ ಹೊಸ ಕಥೆ ಹಾಗು ಪದಗಳನ್ನು ಮುಂದೆ ತರಗತಿಯಲ್ಲಿ ಬಳಸಲು ಸುಗಮಗಾರರು ಅವುಗಳನ್ನು ಗುರುತುಮಾಡಿ–ಕೊಳ್ಳಬೇಕಿತ್ತು. ಇದಕ್ಕಾಗಿ ಕೊಠಡಿಯ ಎರಡು ಮೂಲೆಗಳಲ್ಲಿ ಎರಡು ಪ್ರತ್ಯೇಕ ಪೆಟ್ಟಿಗೆಗಳನ್ನು (ಭಾಷಾ ಬುಟ್ಟಿ, ಭಾಷಾ ಭಂಡಾರ) ಇಡಲಾಯಿತು. ಈ ರೀತಿ ದೊರೆತ ಪದ ಹಾಗು ಕಥೆಗಳನ್ನು ಕ್ರಮೇಣ ಕಲೆಹಾಕುವ ಪ್ರಕ್ರಿಯೆಯು ಸಂಬಂಧಪಟ್ಟ ಸುಗಮಗಾರರಿಗೆ ತಮ್ಮದೇ ಸಂಸ್ಥೆಗಳಲ್ಲಿ ಶಬ್ದಕೋಶ, ಕಥೆಪುಸ್ತಕ ಹಾಗು ಹಾಡಿನ ಪುಸ್ತಕಗಳ ರೂಪದಲ್ಲಿ ಬಳಸಬಹುದಾದ ಕಲಿಕಾ ಸಂಪನ್ಮೂಲಗಳನ್ನು ರಚಿಸಿಕೊಳ್ಳಲು ಅನುವು ಮಾಡಿಕೊಟ್ಟಿತು. ಮಕ್ಕಳ ಮಾತೃ–ಭಾಷೆಗಳಲ್ಲಿ ನಡೆದ ಪ್ರಾಥಮಿಕ ಚರ್ಚೆಗಳಿಂದ ಮಕ್ಕಳು ತಮ್ಮ ಮೂಲಭೂತ ಭಾಷಾ ಕಲಿಕಾ ಕೌಶಲಗಳನ್ನು ಬಲಪಡಿಸಿಕೊಳ್ಳಲು ಅನುಕೂಲವಾಯಿತು. ಮಕ್ಕಳು ತಮ್ಮ ಪ್ರಾಥಮಿಕ ಭಾಷಾ ಕಲಿಕಾ ಕೌಶಲಗಳನ್ನು ಬಳಸಿಕೊಂಡು ಹಿಂದಿ ಭಾಷಾ ಸಂವಹನದ ಪ್ರಾಥಮಿಕ ತತ್ತ್ವಗಳನ್ನು ಕಲಿಯಲು ಅನುಕೂಲವಾಗಲೆಂದು ಕ್ರಮೇಣ ಈ ಚರ್ಚೆಗಳನ್ನು ಹಿಂದಿ ಭಾಷೆಯಲ್ಲಿ ನಡೆಸುವುದನ್ನು ಪ್ರೋತ್ಸಾಹಿಸಲಾಯಿತು. ಈ ಯೋಜನೆಯು ಇಡೀ ಸಮುದಾಯದ ಜನಪ್ರಿಯತೆಯನ್ನು ಗಳಿಸಿತು. ದೇಶದ ಯಾವುದೇ ಭಾಗದ ಗ್ರಾಮೀಣ ಜನರ ಹಾಗು ಮಕ್ಕಳ ಸಾಮಾಜಿಕ ಜೀವನದ ಅಂಶಗಳನ್ನು ಕುರಿತು ಚರ್ಚೆಗಳನ್ನು ಸುಗಮಗೊಳಿಸಲು ದ್ವಿಭಾಷಾ ಸಚಿತ್ರ ಶಬ್ದಕೋಶಗಳಿಗೆ ಇರುವ ಸಾಮರ್ಥ್ಯ ಹೇರಳವಾಗಿದೆ.

ನುಡಿ ಕಟ್ಟೆ (Bhasha Puliya)

ಶಾಲಾಪೂರ್ವ ಶಿಕ್ಷಣವನ್ನು ಮಕ್ಕಳ ಮೊದಲ ನುಡಿಯಲ್ಲಿ ದಾಟಿಸುವುದು ಉತ್ತಮ ಎಂಬುದು ಸಾರ್ವತ್ರಿಕ ಭಾವನೆಯಾಗಿದೆ. ಇದಕ್ಕಾಗಿ 2015ರಲ್ಲಿ M-TALL ("ಮಾತೃಭಾಷಾ ಆಧಾರಿತ ಕ್ರಿಯಾತ್ಮಕ ಭಾಷಾ ಕಲಿಕೆ")ಯು "ನುಡಿ ಕಟ್ಟೆ" (Bhasha Puliya) ಎಂಬ ಮಕ್ಕಳ ಭಾಷಾ ತಯಾರಿಯ ಕಂತೆಯನ್ನು ಅಭಿವೃದ್ಧಿಗೊಳಿಸಿದೆ. ಇದು ಮಕ್ಕಳ ಮನೆಯ ಆಡುಭಾಷೆಗಳು ಮತ್ತು ಜಾರ್ಖಂಡ್ ರಾಜ್ಯದ ಅಂಗನವಾಡಿ ಹಾಗು ಪ್ರಾಥಮಿಕ ಶಾಲೆ ಭಾಷೆಗಳ ನಡುವೆ ಸಂಪರ್ಕಸೇತುವಾಗಿ ಕೆಲಸಮಾಡುತ್ತದೆ. ಮಕ್ಕಳು ಈ ಕಲಿಕಾ ಚಟುವಟಿಕೆಗಳಲ್ಲಿ ಕ್ರಿಯಾತ್ಮಕವಾಗಿ ಪಾಲ್ಗೊಳ್ಳಲು ಹಾಗು ತನ್ಮೂಲಕ, ಶಾಲಾಪೂರ್ವ ಶಿಕ್ಷಣ ಕಾರ್ಯಕ್ರಮದ ಮೂಲಘಟಕ ರೂಪದ ಅಪೇಕ್ಷಿತ ಕೌಶಲಗಳನ್ನು ಗಳಿಸಲು ಆಗುವಂತೆ ಒಂದು ಸರಣಿ ರೂಪದ ಮಗುಸ್ನೇಹಿ ಕಲಿಕಾ ಚಟುವಟಿಕೆಗಳನ್ನು ಈ ಕಂತೆಯೊಂದಿಗೆ ಕ್ರಮಬದ್ಧವಾಗಿ ಅಂತರ್ಗತಗೊಳಿಸ ಲಾಗಿದೆ.

ಕಲಿಕೆಯ ಹನ್ನೆರಡು ಮುಖ್ಯ ಹಂತಗಳನ್ನು ಚಟುವಟಿಕೆ ಮಾರ್ಗದರ್ಶಕ 12 ಪುಸ್ತಕಗಳ ಮೂಲಕ ಒಳಗೊಳ್ಳಲಾಯಿತು. ಈ ಹನ್ನೆರಡು ಪುಸ್ತಕಗಳನ್ನೂ ಅಳವಡಿಸಿಕೊಂಡು ಒಂದು ಸರಣಿಕ್ರಮದಲ್ಲಿ ಎಲ್ಲಾ ಚಟುವಟಿಕೆಗಳನ್ನೂ ಸ್ಪರ್ಶಿಸುವ ಕಲಿಕೆಯ ಏಣಿಗಳನ್ನು ರೂಪಿಸಲಾಯಿತು. ಜೊತೆಗೆ, ಮಕ್ಕಳ ಕಲಿಕೆಯ ಪ್ರಗತಿಯನ್ನು ತಿಳಿಯಲು ಪ್ರತ್ಯೇಕ ಕಲಿಕಾ ಮೂಲ್ಯಾಂಕನದ ಮಾದರಿಗಳನ್ನು, ಚಟುವಟಿಕೆ ಪ್ರಗತಿ ಪಟ್ಟಿಯನ್ನು, ನುಡಿಕಟ್ಟೆಯನ್ನು ಪರಿಚಯಿಸುವ ಮಾರ್ಗದರ್ಶಕ ಪುಸ್ತಕವನ್ನು, ಸಂಪೂರ್ಣ ವರ್ಷದ ಶೈಕ್ಷಣಿಕ ಕ್ಯಾಲೆಂಡರ್ ಒಂದನ್ನು ಹಾಗು ಜಾನಪದ ಕಥೆ ಮತ್ತು ಹಾಡುಗಳನ್ನು ಕ್ರಮಬದ್ಧವಾಗಿ ಜೋಡಿಸಬಹುದಾದ ಕಡತಗಳನ್ನು ಅಭಿವೃದ್ಧಿಗೊಳಿಸಲಾಯಿತು.

ಈ ಕಾರ್ಯಕ್ರಮವು ಮಕ್ಕಳ ಶಾಲಾ ತಯಾರಿ ಹಾಗು ಭಾಷಾ ಕಲಿಕೆಯ ಕೌಶಲಗಳ ಮೇಲೆ ಮಹತ್ತ್ವಪೂರ್ಣ ಪ್ರಭಾವ ಬೀರಿದ್ದು ಮಾತ್ರವೇ ಅಲ್ಲದೆ, ಪ್ರತಿ ಮಗುವೂ ಕಲಿಕಾ ಪ್ರಕ್ರಿಯೆಯಲ್ಲಿ ನಲಿವಿನಿಂದ ಪಾಲ್ಗೊಳ್ಳಲು, ಭಾಷಾ ಕಲಿಕೆಯ ಕೌಶಲಗಳನ್ನು ಗಳಿಸಲು ಹಾಗು ವರ್ಣಮಾಲೆ, ಸಂಖ್ಯೆಗಳ ಪರಿಚಯ ಪಡೆಯಲು ಹಾಗು ವಿಷಯಾಧಾರಿತ ಕಲಿಕೆಯನ್ನು ಎದುರುನೋಡುವ ಶಾಲಾ ದಿನಗಳಿಗಾಗಿ ಸಜ್ಜಾಗಲು ಮಾತೃಭಾಷಾ–ಆಧಾರಿತ ಶಾಲಾಪೂರ್ವ

ಶಿಕ್ಷಣವು ಎಷ್ಟು ಅನುಕೂಲಕಾರಿ ಎಂಬುದಕ್ಕೆ ಸ್ಪಷ್ಟ ಸಾಕ್ಷ್ಯಾಧಾರವನ್ನು ಒದಗಿಸಿತು. ಮಕ್ಕಳು ತಂಡಗಳಲ್ಲಿ ಕಲಿಕಾ ಚಟುವಟಿಕೆಗಳಲ್ಲಿ ಭಾಗವಹಿಸುವುದು ಹೇಗೆ, ಒಟ್ಟಾಗಿ ಕಲೆತು ಕಲಿಯುವುದು ಹೇಗೆ ಎಂಬುದನ್ನು ಕೂಡಾ ಕಲಿಯುತ್ತಾರೆ.

ಕಾರ್ಯಕ್ರಮಗಳ ಯಶಸ್ಸು

ಭಾಷಾ ಕಲಿಕೆಗೆ ಬಹುಬಗೆಯ ವಿಧಾನದ ಅಗತ್ಯವಿದೆ ಎಂಬುದು ಈಗ ದೃಢಪಟ್ಟಿದೆ. ಸಮುದಾಯದ ಭಾಷಾ ಕಾರ್ಯಕರ್ತರೊಂದಿಗೆ ಸಾಹಿತಿಗಳು ಕುಳಿತು, ಅವರ ಸಮುದಾಯದಲ್ಲಿ ಮಾಡಬಹುದಾದ ಹಾಗು ಅವರ ಪ್ರದೇಶದಲ್ಲಿನ ಮಕ್ಕಳು ಸಕ್ರಿಯವಾಗಿ ಭಾಗವಹಿಸಲು ಸಾಧ್ಯವಿರುವ ಪ್ರಧಾನ ಚಟುವಟಿಕೆಗಳ ಪಟ್ಟಿ ತಯಾರು ಮಾಡಿದರು. ಉದಾಹರಣೆಗೆ, ಬೇಸಿಗೆಯಲ್ಲಿ ವಿವಿಧ ಹಬ್ಬ ಹಾಗು ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು, ಬಗೆ–ಬಗೆಯ ಸಂತೆಗಳಿಗೆ, ಹೊಲ–ಗದ್ದೆಗಳಿಗೆ, ಹಣ್ಣಿನ ತೋಟಗಳಿಗೆ ಖುಷಿಯಿಂದ ಭೇಟಿ ನೀಡುವುದು ಮತ್ತು ಬೇಸಿಗೆ ಹಬ್ಬಗಳನ್ನು ಆಚರಿಸಲು ಹತ್ತಿರದ ಪ್ರದೇಶಗಳಿಗೆ ಭೇಟಿ ನೀಡುವುದು ಎಲ್ಲವೂ ಮಕ್ಕಳ ದಿನನಿತ್ಯದ ಜೀವನದ ಭಾಗಗಳಾಗಿದ್ದು, ಶೈಕ್ಷಣಿಕ ವರ್ಷದ ಮೊದಲ ಭಾಗದಲ್ಲಿ ಕಲಿಕೆಗೆಂದು ನಿಗದಿಪಡಿಸಿದ ಪರಿಕಲ್ಪನೆಗಳನ್ನು ಮಕ್ಕಳು ಕಲಿಯಲು ಇವು ನೆರವಿಗೆ ಬರುತ್ತವೆ. ಉದಾಹರಣೆಗೆ, ಒಂದನೇ ತರಗತಿಯ ಮಕ್ಕಳಿಗೆ ಹಾಡುವ, ಜೊತೆಗೂಡಿ ಆಡುವ, ಕಥೆ ಕೇಳುವ, ಅನುಭವಗಳನ್ನು ಹಂಚಿಕೊಳ್ಳುವ, ಚಿತ್ರಬಿಡಿಸುವ ಹಾಗು ಚಿತ್ರಗಳನ್ನು ಅರ್ಥಮಾಡಿಕೊಳ್ಳುವ ಇವೇ ಮೊದಲಾದ ವಿಶಾಲ ವ್ಯಾಪ್ತಿಯ ಆಸಕ್ತಿದಾಯಕ ಕಲಿಕಾ ಚಟುವಟಿಕೆಗಳಲ್ಲಿ ಭಾಗವಹಿಸಲು ಅನುವು ಮಾಡಿಕೊಡಲಾಗುತ್ತದೆ. ಆ ಮೂಲಕ ಅವರು ಶಾಲೆಯ ಕಲಿಕಾ ಚಟುವಟಿಕೆಗಳಲ್ಲಿ ಇನ್ನೂ ಹೆಚ್ಚಿನ ಆಸಕ್ತಿ ತೋರಲು ಸಾಧ್ಯವಾಗುತ್ತದೆ.

ಭಾಷಾ ವಿಷಯಗಳನ್ನು ಅಭಿವೃದ್ಧಿಗೊಳಿಸುವವರು ಸಾಮುದಾಯಿಕ ಹಬ್ಬಗಳಿಗೆ ಹಾಗು ವೃತ್ತಿಗಳಿಗೆ ಸಂಬಂಧಿಸಿದ ಸಂದರ್ಭ, ಕಥೆ, ಪದ್ಯ, ಒಗಟು ಮೊದಲಾದವುಗಳನ್ನು ಗುರುತಿಸುವಂತೆಯೇ, ಗಣಿತ ವಿಷಯದ ವಿನ್ಯಾಸಕರು ರಂಗೋಲಿ, ಗೋಡೆ ವಿನ್ಯಾಸಗಳು, ಸಮುದಾಯದ ವೃತ್ತಿಗಳಿಗೆ ಸಂಬಂಧಿಸಿದ ವಸ್ತುಗಳ ಆಕಾರ ಹಾಗು ಗಾತ್ರಗಳ ಮೂಲಕ ಮಕ್ಕಳನ್ನು ಗಣಿತೀಯ ಅನ್ವೇಷಣೆ, ಚಿಂತನೆ, ಚರ್ಚೆಗಳಲ್ಲಿ ತೊಡಗುವಂತೆ ಮಾಡುವ ಆಸಕ್ತಿದಾಯಕ ಕಲಿಕಾ ಚಟುವಟಿಕೆಗಳ ಆಯೋಜನೆ ಮಾಡಿದ್ದರು.

ಚಟುವಟಿಕೆ ಆಧಾರಿತ ಕಲಿಕಾ ಪಥಗಳು

ಎಲ್ಲಾ ಮಕ್ಕಳೂ ಸಂಭ್ರಮ ಸಡಗರಗಳಿಂದ ತಮ್ಮನ್ನು ತೊಡಗಿಸಿಕೊಳ್ಳುವಂತಹ ಬಹುಬಗೆಯ ಕಲಿಕಾ ಚಟುವಟಿಕೆಗಳನ್ನು ಶೈಕ್ಷಣಿಕ ವರ್ಷದ ವಿವಿಧ ತ್ರೈಮಾಸಿಕಗಳಿಗೂ ವಿನ್ಯಾಸ–ಗೊಳಿಸಲಾಗಿತ್ತು. ಪುಸ್ತಕದ ಪ್ರತಿ ಅಧ್ಯಾಯವೂ ಮಕ್ಕಳು ಜೀವನದ ವೈವಿಧ್ಯವನ್ನು ಸವಿಯುವಂತೆ ಮಾಡುವ ವಿವಿಧ ರೀತಿಯ ಕಲಿಕಾ ಯೋಜನೆಗಳನ್ನು ಒಳಗೊಳ್ಳುವಂತೆ ವಿನ್ಯಾಸಗೊಳಿಸಲಾಗಿದ್ದು, ಮಕ್ಕಳು ಪೂರ್ವನಿರ್ಧಾರಿತ ಕಲಿಕೆಯ ಗುರಿಗಳನ್ನು ತಲುಪಲು ಬೇಕಿರುವಷ್ಟನ್ನು ಕಲಿಯಲು ಸಾಧ್ಯವಾಗುವಂತಿತ್ತು. ಉದಾಹರಣೆಗೆ, ಭಾಷಾ ಪುಸ್ತಕಗಳ ರಚನೆಕಾರರು ವಿಷಯವನ್ನು ಕಥೆ, ಹಾಡು, ಗಾದೆ, ಒಗಟು, ನಾಟಕ ಹಾಗು ರೂಪಕಗಳ ರೂಪದಲ್ಲಿ ವಿನ್ಯಾಸಗೊಳಿಸಿ ಭಾಷೆಯ ಶ್ರೀಮಂತಿಕೆಯನ್ನು ಪರಿಚಯಿಸಲು ಮುಂದಾದರು. ಇವು ಮಕ್ಕಳನ್ನು ನಲಿವಿನಿಂದ ಕೂಡಿದ ಸೃಜನಾತ್ಮಕ ಚಟುವಟಿಕೆಗಳಲ್ಲಿ ತೊಡಗುವಂತೆ ಮಾಡುತ್ತಾ, ತನ್ಮೂಲಕ, ವಿಷಯದ ಸೌಂದರ್ಯ ಮತ್ತು ವೈವಿಧ್ಯವನ್ನು ಕಂಡುಕೊಳ್ಳಲು ನೆರವು ನೀಡುವಂತಿದ್ದವು. ಇವೆಲ್ಲದರಲ್ಲಿ ಪಾಲ್ಗೊಳ್ಳುತ್ತಾ, ಮಕ್ಕಳು ತಮಗೆ ಪರಿಚಯವಿರುವ ಸ್ಥಳೀಯ ಅನುಭವ ಹಾಗು ಘಟನೆಗಳನ್ನೇ ಬಳಸಿ ತಾವು ಕಲಿಕೆಯಲ್ಲಿ ಸೃಜನಾತ್ಮಕವಾಗಿ ತೊಡಗಿಸಿ–ಕೊಳ್ಳುವಂತೆ ವಿಷಯವನ್ನು ಹೇಗೆ ರೂಪಿಸಲಾಗಿದೆ ಎಂದು ಕೂಡ ಕಂಡುಕೊಳ್ಳುತ್ತಾರೆ.

ಸಮುದಾಯ ಬೆಂಬಲಿತ ಬೋಧನ ಪ್ರಕ್ರಿಯೆಗಳು

ಕಥೆಗಾರರು, ಗಾಯಕರು, ನೃತ್ಯಪಟುಗಳು, ಸಂಗೀತಗಾರರು, ಕವಿಗಳು, ಕಲಾವಿದರು, ಗಾದೆ–ಒಗಟು ಇತ್ಯಾದಿಗಳ ಭಂಡಾರವೇ ಆಗಿರುವಂತಹ ಸಮುದಾಯದ ಸಂಪನ್ಮೂಲ ವ್ಯಕ್ತಿಗಳು ಶಾಲೆಗಳೊಂದಿಗೆ ಸಹಕರಿಸುವುದನ್ನು ಹಾಗು ಅವರೆಲ್ಲರೂ ಶಾಲೆಗಳಿಗೆ ಭೇಟಿ ನೀಡಿ ತಮ್ಮ ಚಟುವಟಿಕೆಗಳನ್ನು ಶಾಲಾ ಶಿಕ್ಷಕರ ಜೊತೆಗೂಡಿ ನಿರ್ವಹಿಸುವುದರ ಮೂಲಕ ಬೋಧನಾ ಪ್ರಕ್ರಿಯೆಗೆ ಹೊಸ ಆಯಾಮವನ್ನು ತರುವುದನ್ನೇ ಪಠ್ಯಪುಸ್ತಕ ಲೇಖಕರು ಗುರಿಯಾಗಿ ಇರಿಸಿಕೊಂಡರು. ಮಕ್ಕಳು ತಮಗೆ ಪರಿಚಯವಿರುವ ವ್ಯಕ್ತಿಗಳು, ತಮ್ಮ ಸಂಬಂಧಿಕರು ಶಾಲೆಯಲ್ಲಿ ಶಿಕ್ಷಕರ ಪಾತ್ರದಲ್ಲಿ ಕಾಣಿಸಿಕೊಳ್ಳುವುದನ್ನು ಕಂಡು ಮೂಕವಿಸ್ಮಿತರಾಗುತ್ತಾರೆ. ಸಮುದಾಯದ ಸಂಪನ್ಮೂಲ ವ್ಯಕ್ತಿಗಳು ತಮ್ಮ ಸಮೃದ್ಧ ಕೌಶಲಗಳೊಂದಿಗೆ ತರಗತಿಯ ಕಲಿಕೆಯ ಗುರಿಗಳ ಕಡೆಗೆ ಮಕ್ಕಳನ್ನು ನಿರ್ದೇಶಿಸುವಲ್ಲಿ ತಮ್ಮ ಜ್ಞಾನ ಹಾಗು ಕೌಶಲಗಳ ಪ್ರದರ್ಶನಕ್ಕೆ ಒಂದು ಅವಕಾಶ ಕಂಡುಕೊಳ್ಳುವಂತಾಗುತ್ತದೆ. ಈ ಸಮುದಾಯ–ಆಧಾರಿತ ವಿಧಾನವು ಶಾಲೆಯ ಬೋಧನಕಲಾ ಪ್ರಕ್ರಿಯೆಗಳನ್ನು ಗಮನಾರ್ಹವಾಗಿ ಶ್ರೀಮಂತಗೊಳಿಸುತ್ತದೆ.

ಶ್ರೇಣೀಕೃತ ವಾಚನ ಸಂಪನ್ಮೂಲಗಳು
(Graded reading resources)

ಮೊದಲನೇ ತರಗತಿಗಾಗಿ ಸುಮಾರು ಇಪ್ಪತ್ತು ದೊಡ್ಡ ಕಥೆ–ಪುಸ್ತಕಗಳಿದ್ದು, ಅವುಗಳಲ್ಲಿ ಭಾಷೆ ಹಾಗು ಗಣಿತಕ್ಕೆ ಸಂಬಂಧಿಸಿದಂತೆ ಅನೇಕ ಶಿಶುಸ್ನೇಹಿಯಾದ ರೋಚಕ ಕಥೆಗಳಿವೆ. ದೊಡ್ಡ ಅಕ್ಷರಗಳಲ್ಲಿ ಸಂಕ್ಷೇಪ ಮಾಹಿತಿ ಒದಗಿಸುವ ಈ ಕಥೆ ಪುಸ್ತಕಗಳಿಗೆ ಆಕರ್ಷಕ ವರ್ಣರಂಜಿತ ಚಿತ್ರಗಳನ್ನು ರಚಿಸಲಾಗಿದೆ. ಮಕ್ಕಳಿಗೆ ಪುಸ್ತಕದ ಚಿತ್ರಗಳನ್ನು ತೋರಿಸಿ ಅಲ್ಲಿರುವ ಬೆಕ್ಕು, ಮರ, ತಾಯಿ ಇತ್ಯಾದಿ ಪಠ್ಯಕ್ಕೆ ಅವರನ್ನು ಪರಿಚಯಿಸಲು ಶಿಕ್ಷಣ ಸುಗಮಗಾರರು ಈ ಪುಸ್ತಕಗಳನ್ನು ಬಳಸುತ್ತಾರೆ. ಇವುಗಳನ್ನು ಬಳಸಿಕೊಂಡು ವರ್ಣಮಾಲೆಯ ಅಕ್ಷರಗಳು ಮತ್ತು ಸಂಖ್ಯೆಗಳನ್ನು ತಮ್ಮ ಮೊದಲ ವರ್ಷದಲ್ಲೇ ಕ್ರಮೇಣ ಪರಿಚಯ ಮಾಡಿಕೊಳ್ಳುತ್ತಾರೆ. ಎರಡನೇ ವರ್ಷಕ್ಕಾಗಿ ಮತ್ತೂ ಇಪ್ಪತ್ತು ಸಣ್ಣ ಕಥೆ ಪುಸ್ತಕಗಳಿದ್ದು, ಅವುಗಳಲ್ಲಿ ಹೆಚ್ಚಿನ ಪಠ್ಯವೂ, ಗಾತ್ರದಲ್ಲಿ ಸಣ್ಣದಾದ ವರ್ಣಮಯ ಚಿತ್ರಗಳೂ ಇವೆ. ಮಕ್ಕಳ ವಾಚನಾಭ್ಯಾಸವನ್ನು ಉತ್ತಮಗೊಳಿಸಲು ಅವುಗಳನ್ನು ವಿನ್ಯಾಸಗೊಳಿಸಲಾಗಿದೆ.

ಮುಖ್ಯ ಪರಿಕಲ್ಪನೆಗಳನ್ನು ಪರಿಚಯಿಸುವ ಅಲ್ಲಿನ ಚಟುವಟಿಕೆಗಳು ಮಕ್ಕಳ ವಯಸ್ಸಿಗೆ ಸೂಕ್ತವಾಗಿವೆಯೇ, ರೋಚಕತೆ ಕಾಯ್ದುಕೊಂಡಿವೆಯೇ, ಸಂದರ್ಭೋಚಿತವಾಗಿಯೂ, ಆಸಕ್ತಿದಾಯಕವಾಗಿಯೂ ಇವೆಯೇ ಎಂಬುದರ ಬಗ್ಗೆ ವಿಷಯ ವಿನ್ಯಾಸಕರು ಎಚ್ಚರವಹಿಸಿದ್ದರು. ಮಕ್ಕಳಿಗೆ ಯಾವುದೇ ಅಧ್ಯಾಯವೂ ಉದ್ದವಾಗಿ ತೋರದಂತೆ, ಅಲ್ಲಿನ ಪಠ್ಯವು ಕಠಿಣವಾಗಿಯೂ ಇರದಂತೆ ಸಮತೋಲನ ಕಾಯ್ದುಕೊಳ್ಳಲಾಗಿದೆ. ಜೊತೆಗೆ, ಶಿಕ್ಷಕರಿಗೆ ಸೂಚನೆಗಳನ್ನೂ, ಇತರ ವಿವರಣೆಗಳನ್ನೂ

ಅದು ಒಳಗೊಂಡಿದೆ. ಸಮುದಾಯಗಳಲ್ಲಿ ಮಕ್ಕಳ ಜೀವನ ಹಾಗು ಅನುಭವಗಳನ್ನು ಚಿತ್ರಿಸುವ ವರ್ಣಚಿತ್ರಗಳು ಮಕ್ಕಳ ಮತ್ತು ಶಿಕ್ಷಣ ಸುಗಮಗಾರರ ಚಿಂತನೆ, ಹರ್ಷಾನುಭವಗಳನ್ನು ಉದ್ದೀಪಿಸುವಂತೆ ರಚಿತವಾಗಿವೆ.

ಮಕ್ಕಳು ಹೇಗೆ ಕಲಿಯಬಹುದು

ಪ್ರತಿ ಮಗುವೂ ಕಲಿಯುವುದನ್ನು ಖಾತ್ರಿಪಡಿಸಲು ಮಾತೃಭಾಷಾ ಆಧಾರಿತ ಬಹುಭಾಷಾ ಶಿಕ್ಷಣ ಕಾರ್ಯಕ್ರಮವು (Multi-Lingual Education-MTB-MLE) ಕಾರ್ಯಗತವಾಗಿರುವ ಶಾಲೆಗಳ ಕೆಲವು ಪ್ರಮುಖ ಲಕ್ಷಣಗಳೆಂದರೆ: ಉಲ್ಲಾಸಭರಿತ ಭೌತಿಕ ಹಾಗು ಶೈಕ್ಷಣಿಕ ವಾತಾವರಣ, ಚೆನ್ನಾಗಿ ಮನನಮಾಡಲ್ಪಟ್ಟ ಬೋಧನಕಲೆಯ ಯೋಜನೆಗಳು ಮತ್ತು ಪ್ರಕ್ರಿಯೆಗಳು ಹಾಗು ಸಮುದಾಯದ ಸಂಪನ್ಮೂಲ ತಂಡಗಳೊಂದಿಗೆ ಕಲಿಕೆ ಸಂಬಂಧವಾಗಿ ಸಹಕಾರ. ಇದರೊಂದಿಗೆ 'ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ' (DIET), ವಲಯ ಸಂಪನ್ಮೂಲ ಕೇಂದ್ರಗಳು (BRC), 'ಕ್ಲಸ್ಟರ್ ಸಂಪನ್ಮೂಲ ಸಂಚಾಲಕ'ರ (CRC) ಹಾಗು ಸರ್ಕಾರೇತರ ಸಂಘಟನೆಗಳ ಬೆಂಬಲವನ್ನೂ ಒಳಗೊಂಡಿದೆ. ಶಾಲೆಯನ್ನು ಗ್ರಾಮ / ಸಮುದಾಯದ ಸಂಶೋಧನೆಯ ಹಾಗು ನವೀಕರಣದ ಕೇಂದ್ರವಾಗಿ ಕಾಣಲಾಗುತ್ತದೆ. ಕೆಲವು ಮುಖ್ಯ ಲಕ್ಷಣಗಳು ಇಂತಿವೆ:

ಸಜ್ಜುಗೊಂಡಿರುವ ಶಾಲೆ ಮತ್ತು ಸಮಾಜ

ಪಠ್ಯಪುಸ್ತಕಗಳೊಂದಿಗೆ ನಾವು ಪರಿಕಲ್ಪನಾ ಟಿಪ್ಪಣಿಗಳು ಹಾಗು ತರಬೇತಿಯ ಘಟಕಗಳನ್ನು ರಚಿಸಿಕೊಂಡೆವು. ಸ್ಥಳೀಯರ ಜನಸಂಖ್ಯೆ ಹೆಚ್ಚಾಗಿ ಇರುವ ಹತ್ತು ಜಿಲ್ಲೆಗಳಲ್ಲಿ ಸ್ಥಳೀಯ ಭಾಷೆಗಳಲ್ಲಿ ಮಾತನಾಡುವ ಮಕ್ಕಳು ಮಾತ್ರ ಇರುವ ಸುಮಾರು ಒಂದು ಸಾವಿರ ಶಾಲೆಗಳನ್ನು ಭಾಷಾವಾರು ಸಮೀಕ್ಷೆಯ ಮೂಲಕ ಆರಿಸಿಕೊಳ್ಳಲಾಯಿತು. ಮೊದಲಿಗೆ, ಹೊಸ ಪಠ್ಯಪುಸ್ತಕಗಳನ್ನು ಬಳಸಿ ಮಾತೃಭಾಷಾ ಆಧಾರಿತ ಬಹುಭಾಷಾ ಶಿಕ್ಷಣ ಕಾರ್ಯಕ್ರಮದ (Multi-Lingual Education-MTB-MLE) ಉಪಕ್ರಮಕ್ಕಾಗಿ ಸರ್ಕಾರದ ಯೋಜನೆಯನ್ನು ಶಿಕ್ಷಕರು ಹಾಗು ಸಮುದಾಯದ ಸದಸ್ಯರಿಗೆ ಪರಿಚಯಿಸಲು ಈ ಶಾಲಾ ಪ್ರದೇಶಗಳಲ್ಲಿ ಸೂಕ್ತ ಪರಿಸರ–ನಿರ್ಮಾಣದ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲಾಯಿತು. ಈ ಶಾಲೆಗಳ ಶಿಕ್ಷಕರಿಗೆ ಈ ನೂತನ ವಿಧಾನಕ್ಕೆ ಸಂಬಂಧಿಸಿದ ವಿಷಯ ಹಾಗು ಬೋಧನಕಲೆಯ ಪ್ರಕ್ರಿಯೆಗಳ ಬಗ್ಗೆ ತರಬೇತಿ ನೀಡಿ ಅವನ್ನು ಪರಿಚಯ ಮಾಡಿಕೊಡಲಾಯಿತು.

ಸಮಗ್ರ ಸಮುದಾಯವನ್ನು ತೊಡಗಿಸುವ ಕಾರ್ಯ

ಕಥೆಗಾರರು, ಗಾಯಕರು, ನೃತ್ಯಪಟುಗಳು, ಸಂಗೀತಗಾರರು, ಗಾದೆ–ಒಗಟುಗಳ ರಚನಕಾರರು, ಆಟಿಕೆಗಳ ತಯಾರಕರು, ಹಾಸ್ಯನಟರು ಇವರೇ ಮೊದಲಾದವರನ್ನು ಒಳಗೊಂಡ ಸಮುದಾಯ ಸಂಪನ್ಮೂಲ ತಂಡಗಳನ್ನು ಪ್ರತಿ ಶಾಲೆಯಲ್ಲೂ ಅಣಿಗೊಳಿಸಲಾಯಿತು. ಶಾಲೆ ಮತ್ತು ಸಮುದಾಯ ಸಂಪನ್ಮೂಲ ತಂಡಗಳ ನಡುವೆ ನಡೆದ ಗೋಷ್ಠಿಗಳು ವಿವಿಧ ವಿಷಯಗಳಲ್ಲಿ ಬೋಧನಕಲೆಯ ಪ್ರಕ್ರಿಯೆಗಳನ್ನು ಸುಗಮಗೊಳಿಸುವಲ್ಲಿ ಸಂಪನ್ಮೂಲ ವ್ಯಕ್ತಿಗಳ ಪಾತ್ರಗಳನ್ನು ಪಠ್ಯಪುಸ್ತಕಗಳೊಡನೆ ಬೆಸೆಯುವ ಕೆಲಸವನ್ನು ನೆರವೇರಿಸಿದವು. ಬಳಿಕ, ಒಂದು ನಿರ್ದಿಷ್ಟ ಶಾಲೆಗೆ ಯಾವ ತಂಡವು ಅಲ್ಲಿನ ಮಕ್ಕಳೊಡನೆ ಕೆಲಸಮಾಡಲು, ಅವರು ಅಪೇಕ್ಷಿಸುವ ಜ್ಞಾನ ಹಾಗು ಕೌಶಲಗಳನ್ನು ದಾಟಿಸಲು ಅಗತ್ಯವಿರುವ ತಯಾರಿ ಮಾಡಿಕೊಂಡು ಭೇಟಿ ನೀಡುತ್ತವೆ ಎಂಬುದರ ಬಗ್ಗೆ ಸೂಚನೆಯಿರುವ ಒಂದು ಶೈಕ್ಷಣಿಕ ಕ್ಯಾಲೆಂಡರನ್ನು ಶಾಲೆಗಳು ರೂಪಿಸಿದವು.

ಸರ್ಕಾರದ ಭಾಗೀದಾರಿಕೆ

ಈಗ ಜಾರ್ಖಂಡ್ ಸರ್ಕಾರವು ಈ ಸಾಮಗ್ರಿ ಹಾಗು ತರಬೇತಿಯ ಪ್ರಯೋಜನ ಪಡೆದು ಮಾತೃಭಾಷಾ ಆಧಾರಿತ ಬಹುಭಾಷಾ ಶಿಕ್ಷಣ ಕಾರ್ಯಕ್ರಮವನ್ನು (Mothertongue based Multi-lingual Education-MTB-MLE) ರಾಜ್ಯದ ಹತ್ತು ಜಿಲ್ಲೆಗಳ ಸುಮಾರು ಒಂದು ಸಾವಿರ ಶಾಲೆಗಳಲ್ಲಿ ಜಾರಿಗೆ ತಂದಿದೆ. ಇದಕ್ಕಾಗಿ ಪ್ರಾಥಮಿಕ ಶಾಲಾ ಹಂತದ ಪಠ್ಯಪುಸ್ತಕಗಳನ್ನು ಪ್ರಸ್ತುತ ಲೇಖಕನ ಮಾರ್ಗದರ್ಶನದಲ್ಲಿ ಏಳು ಸ್ಥಳೀಯ ಹಾಗು ಪ್ರಾದೇಶಿಕ ಭಾಷೆಗಳಲ್ಲಿ ಅಭಿವೃದ್ಧಿಗೊಳಿಸಲಾಯಿತು. ಭಾಷೆ ಹಾಗು ಗಣಿತದ ಪಠ್ಯಪುಸ್ತಕಗಳು ಮಕ್ಕಳು, ಶಿಕ್ಷಕರು ಮತ್ತು ಸಮುದಾಯಗಳ ಸದಸ್ಯರಲ್ಲಿ ಉತ್ಸಾಹ ಹಾಗು ಆಸಕ್ತಿಗಳ ಭಾರಿ ಅಲೆಯನ್ನೇ ಹುಟ್ಟುಹಾಕಿದೆ. ಈ ಸಮುದಾಯ–ಆಧಾರಿತ ವಿಧಾನವು ಕ್ರಿಯಾಶೀಲ ವಿದ್ಯಾರ್ಥಿಗಳು, ಉತ್ಸುಕ ಶಿಕ್ಷಕರು ಹಾಗು ಜೀವಂತಿಕೆಯಿಂದ ತುಂಬಿತುಳುಕುವ ಸಮುದಾಯ ಬೆಂಬಲಿತ ಚಟುವಟಿಕೆಗಳ ಮೂಲಕ ಶಾಲೆಗಳು ಪರಿವರ್ತನೆಯ ಹಾದಿ ತುಳಿಯುವಂತೆ ಮಾಡಿದೆ.

ಮುಕ್ತಾಯ

ಮಾತೃಭಾಷಾ ಆಧಾರಿತ ಬಹುಭಾಷಾ ಶಿಕ್ಷಣದ ಕಾರ್ಯಕ್ರಮವು ಶಾಲೆಗಳಲ್ಲಿ ಪರಿವರ್ತನೆ ತಂದುದಲ್ಲದೇ, ಇದರಲ್ಲಿ ತೊಡಗಿಸಿ–ಕೊಂಡಿರುವ ಸ್ಥಳೀಯ ಸಮುದಾಯಗಳಲ್ಲಿ ಪ್ರಚಂಡ ಉತ್ಸಾಹ, ಸಂಭ್ರಮಗಳನ್ನು ಹುಟ್ಟುಹಾಕಿದೆ. ಶಿಕ್ಷಕರ ಮತ್ತು ವಿದ್ಯಾರ್ಥಿಗಳ ದಾಖಲಾತಿ ಹಾಗು ಹಾಜರಿಗಳೆರಡೂ ಗಣನೀಯವಾಗಿ ಸುಧಾರಿಸಿದ್ದರೆ, ಶಾಲೆ ತೊರೆಯುವ ಮಕ್ಕಳ ಪ್ರಮಾಣವೂ ಈ ಶಾಲೆಗಳಲ್ಲಿ ಗಣನೀಯವಾಗಿ ಕುಸಿದಿದೆ. ಒಂದು ಕಾಲದಲ್ಲಿ ಬಿಕೋ ಎನ್ನುತ್ತಿದ್ದ ತರಗತಿ ಕೊಠಡಿಗಳಲ್ಲಿ ಈಗ ನವಚೈತನ್ಯ, ಉತ್ಸಾಹ, ಸಮುದಾಯದ ಬೆಂಬಲದ ಬಲ ಹಾಗು ಕಲಿಕಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಹುರುಪು ಕಾಣಿಸುತ್ತಿದೆ. ಸಮುದಾಯದ ಸದಸ್ಯರ ಸಕ್ರಿಯ ಸಹಕಾರ, ಜಾನಪದ ಆಧರಿತ ಪಠ್ಯವಿಷಯಗಳ ಮೂಲಕ ತರಗತಿಯ ಪ್ರಕ್ರಿಯೆಗಳಲ್ಲಿ ನವಚೈತನ್ಯದ ಸಂಚಾರವಾಗಿದ್ದು, ಅದರ ಅಂತಿಮ ಪರಿಣಾಮವಾದ ಸಾಮಾಜಿಕ ಬದಲಾವಣೆಗಳನ್ನು ತಂದಿದೆ. ಈ ಪುಸ್ತಕಗಳಿಗೆ ಪ್ರಸ್ತುತ ಸ್ಥಳೀಯ ಸಾಂದರ್ಭಿಕ ಸಂಪನ್ಮೂಲಗಳನ್ನು ಸೇರಿಸಿಕೊಳ್ಳುವುದರ ಮೂಲಕ ಅವುಗಳನ್ನು ಯಾವುದೇ ರಾಷ್ಟ್ರೀಯ ಭಾಷೆಯಲ್ಲಿ ಅಳವಡಿಸಿ–ಕೊಳ್ಳಬಹುದಾಗಿದೆ.



ಬಿನಯ್ ಪಟ್ಟನಾಯಕ್ ಅವರು ಜಾರ್ಖಂಡ್ ರಾಜ್ಯದ ಆಖ್ರಾ ಎಂಬಲ್ಲಿರುವ M-TALL ನ (ಮಾತೃಭಾಷಾ ಆಧಾರಿತ ಕ್ರಿಯಾತ್ಮಕ ಭಾಷಾ ಕಲಿಕೆ) ಸ್ಥಾಪಕರಾಗಿದ್ದಾರೆ. ಪ್ರಸ್ತುತ ಅವರು ಬಿಹಾರದ ವಿಶ್ವ ಬ್ಯಾಂಕ್ ನೆರವಿನ ಯೋಜನೆ 'ಶಿಕ್ಷಕ ಪರಿಣಾಮಕಾರಿತ್ವದ ವರ್ಧನೆಯ (Enhancing Teacher Effectiveness in Bihar) ಅನುಷ್ಠಾನಕ್ಕೆ ಬೆಂಬಲವಾಗಿರುವ ಕಾರ್ಯಾಲಯ ತಂಡದ (Implementation Support Agency -ISA) ನಾಯಕರಾಗಿ ದುಡಿಯುತ್ತಿದ್ದಾರೆ. ಅವರು ಭಾರತದಲ್ಲಿ ವಿಶ್ವಬ್ಯಾಂಕ್‌ನ ಹಿರಿಯ ಶೈಕ್ಷಣಿಕ ಸಲಹೆಗಾರರಾಗಿದ್ದಾರೆ. ಇದಕ್ಕೂ ಮೊದಲು ಅವರು ಯೂನಿಸೆಫ್‌ನಲ್ಲಿ ಶಿಕ್ಷಣತಜ್ಞರಾಗಿ ನವದೆಹಲಿ ಹಾಗು ಜಾರ್ಖಂಡ್ ರಾಜ್ಯದ ಕಚೇರಿಗಳಲ್ಲಿ ಎಂಟು ವರ್ಷಕ್ಕೂ ಮೇಲ್ಪಟ್ಟು ಸೇವೆ ಸಲ್ಲಿಸಿದ್ದಾರೆ. ಅದಕ್ಕೂ ಮೊದಲು, ಭಾರತ ಸರ್ಕಾರದ ಮಾನವ ಸಂಪನ್ಮೂಲ ಸಚಿವಾಲಯದ ರಾಷ್ಟ್ರೀಯ ತಾಂತ್ರಿಕ ಬೆಂಬಲ ತಂಡದ (Technical Support Group -TSG) ಮುಖ್ಯ ಸಲಹೆಗಾರರಾಗಿ (ಗುಣಮಟ್ಟದ ಶಿಕ್ಷಣ) ಸುಮಾರು ಹತ್ತು ವರ್ಷಗಳ ಕಾಲ ಕಾರ್ಯನಿರ್ವಹಿಸಿದ್ದಾರೆ. ಅವರು ವಿಜ್ಞಾನ ಹಾಗು ಶಿಕ್ಷಣದ ವಿಚಾರವಾಗಿ ಮಕ್ಕಳಿಗಾಗಿ, ಶಿಕ್ಷಕರಿಗಾಗಿ ಸುಮಾರು 180 ಕ್ಕೂ ಮಿಕ್ಕು ಪುಸ್ತಕಗಳನ್ನು ಬರೆದಿದ್ದಾರೆ, ಅನುವಾದಿಸಿದ್ದಾರೆ. ಇಷ್ಟೇ ಅಲ್ಲದೆ, ಅನೇಕ ರಾಜ್ಯಗಳಲ್ಲಿ ಬಳಕೆಯಾಗುತ್ತಿರುವ ಪಠ್ಯಕ್ರಮ ಹಾಗು ಪಠ್ಯಪುಸ್ತಕಗಳ ವಿಚಾರವಾಗಿ ಇವರು ಮಾಡಿರುವ ಸಾಧನೆಯು ಅನೇಕ ರಾಷ್ಟ್ರೀಯ ಹಾಗು ರಾಜ್ಯಪ್ರಶಸ್ತಿಗಳನ್ನು ಇವರ ಮುಡಿಗೇರಿಸಿದೆ. ಇವರನ್ನು binaypattanayak@outlook.com ನಲ್ಲಿ ಸಂಪರ್ಕಿಸಬಹುದು

ಅನುವಾದ: **ಕುಶಾಲ್ ಬಿ. ಎಸ್** । ಪರಿಶೀಲನೆ: **ಚಂದ್ರಶೇಖರ್ ಮಂಡೆಕೋಲು**

ಶಿಕ್ಷಕರು ಎಲ್ಲ ಮಕ್ಕಳಿಗೂ ಒಂದೇ ಬಗೆಯ ವಿಷಯವನ್ನು, ಒಂದೇ ವೇಳೆಗೆ, ಏಕಪ್ರಕಾರದ ವಿಧಾನದಿಂದ ಬೋಧಿಸಿ, ಒಂದೇ ತೆರನ ಫಲಿತಾಂಶಗಳನ್ನು ಪಡೆಯಬೇಕು ಎಂದು ಇನ್ನೂ ನಾವು ನಿರೀಕ್ಷಿಸುತ್ತೇವೆ. ಇದು ಸೋಲಲೆಂದೇ ವಿನ್ಯಾಸಗೊಳಿಸಿದಂತಹ ವಿಚಾರವಾಗಿದೆ; ಏಕೆಂದರೆ, ಉಳಿದಂತೆ ಬಹು ಚುರುಕಾಗಿಯೂ, ಸಮರ್ಥರಾಗಿಯೂ ಇರುವ ಬಹುದೊಡ್ಡ ಪ್ರಮಾಣದ ಮಕ್ಕಳು ಒಂದಲ್ಲ ಒಂದು ಕಾರಣಕ್ಕೆ ಕಲಿಕಾ ಪ್ರಕ್ರಿಯೆಯಿಂದ ಹೊರಗೆ ಉಳಿಯುವುದನ್ನು ಖಾತ್ರಿ ಪಡಿಸಿರುವುದಷ್ಟೇ ಇದರ ಸಾಧನೆ.

–ಸುಬೀರ್ ಶುಕ್ಲ, ಸ್ಪಂದನಶೀಲ ಶಾಲೆಗಳೇಕೆ ಬೇಕು?, ಪು.110